R.W. - 1

ದಿನಾಂಕಃ 08.07.2022 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಶ್ರೀ RKM ವಕೀಲರಿಂದ -

ನಾನು ನನ್ನ ಮುಖ್ಯ ವಿಚಾರಣೆಯಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದನ್ನು ನಾನು ಹೇಳಿ ಬರೆಯಿಸಿದ್ದು, ಬರೆದ ನಂತರ ಅದನ್ನು ನನಗೆ ಓದಿ ಹೇಳಿದ್ದು ನಂತರ ಸಹಿ ಮಾಡಿರುತ್ತೇನೆ. ನನ್ನ ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ಯಾವುದೇ ದಾಖಲೆಗಳನ್ನು ನಿಶಾನೆಗೊಳಿಸಲು ಇರುವುದಿಲ್ಲ.

ಪಾಟೀ ಸವಾಲುಃ ಶ್ರೀ ವಿ ಡಿ ಪಿ ವಕೀಲರಿಂದ -

ನಾನು ಈಗ ಸದ್ಯಕ್ಕೆ ವಿದ್ಯಾರ್ಥಿ ಇರುತ್ತೇನೆ, ಯಾವುದೇ ಕೆಲಸ ಮಾಡುತ್ತಿಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ನಾನು ನನ್ನ ಕೆಲಸ ಇಂಜಿನಿಯರ್ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಇಂಜಿನಿಯರಿಂಗ್ ಪಧವೀರ ನಿರುತ್ತೇನೆ ಎಂದು ನುಡಿಯುತ್ತಾರೆ. ಎರಡು ತಿಂಗಳುಗಳ ಕಾಲ ಬೆಂಗಳೂರಿನಲ್ಲಿ ಕೆಲಸ ಮಾಡಿದ್ದು ಈಗ ಸದ್ಯಕ್ಕೆ ಪರೀಕ್ಷೆಗೋಸ್ಕರ ಕೆಲಸ ಮಾಡುತ್ತಿಲ್ಲ. ನನ್ನ ಸ್ವಂತ ಊರು ಕುಷ್ಟಗಿ ಇರುತ್ತದೆ. ನನ್ನ ತಪ್ಪಿನಿಂದ ಅಪಘಾತವಾಗಿದ್ದು ಅಜ್ಜಪ್ಪ ನು ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಜಗಳೂರು ಪೊಲೀಸರು ಸಲ್ಲಿಸಿದ ದಾಖಲೆಗಳು ಸತ್ಯವಾಗಿರುತ್ತವೆ ಎಂದರೆ ಸರಿಯಲ್ಲ. ಜಗಳೂರು ಪೊಲೀಸರು ನನ್ನ ವಿರುದ್ದ ಅಂತಿಮ ವರದಿಯನ್ನು ಜಗಳೂರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಜಗಳೂರಿನಲ್ಲಿ ಕ್ರಿಮಿನಲ್ ಕೇಸ್ ನಂ 779/2020 ದಾಖಲಾಗಿದ್ದು ಇದೇ ತಿಂಗಳು ತಾಃ 21.7.2022 ರಂದು ನಿಗದಿಗೊಳಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿಲ್ಲ, ಬೇರೆ ಯಾರದೋ ತಪ್ಪಿನಿಂದ ಅಪಘಾತವಾಗಿದೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿದ ಹಾಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಎ 03 ಎಂಡಿ 8158 ಎರಡನೇ ಎದುರುದಾರನಿಗೆ ಸಂಬಂಧಪಟ್ಟ ವಾಹನ ಇರುತ್ತದೆ. 2ನೇ ಎದುರುದಾರನಿಗೆ ಸಂಬಂಧಪಟ್ಟ ವಾಹನ ಇರುತ್ತದೆ ಎಂದರೆ ಸರಿ. ಅಪಘಾತವಾದ ದಿನದಂದು ನನ್ನ Driving Licence ಇತ್ತು ಎಂದರೆ ಸರಿ. ಸದರಿ Driving Licence ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. Insurance ಇಲ್ಲದ ವಾಹನವನ್ನು ಸಾರ್ವಜನಿಕ ರಸ್ತೆ ಮೇಲೆ ಚಲಾಯಿಸುವುದು

R.W. - 1

ಕಾನೂನುಬಾಹಿರವಾಗಿರುತ್ತದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದ್ದು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರವನ್ನು ಕೊಡಲು ನಾನು ಮತ್ತು 2 ನೇ ಎದುರುದಾರರು ಬಾಧ್ಯಸ್ಥರಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಎದುರುದಾರರು ಏಕಪಕ್ಷಿಯ ಇರುವುದರಿಂದ ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸಾ.ಸ.ಇದೆ.

ಪ್ರಧಾನ ಹಿರಿಯ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ ಜೆ ಎಂ, ದಾವಣಗೆರೆ.